ಶ್ರೀ ಎ.ಬಿ. ಜಕನೂರ್.—ಮಾನ್ಯ ಸದಸ್ಯರು ಅಡ್ವೊಕೇಟ್ ಇರುವುದರಿಂದ ಅವರೇ ಅಗ್ರಿಮೆಂಟ್ ನೋಡಿ ಹೇಳಿದರೆ ಆಗಬಹುದು.

MR. SPEAKER.—Not necessary. This is a matter which has to take place in your chamber, and not here. Now, let us go to the next item of the Agenda. Now, Sri A. Lakshmi Sagar awill call the Attention of the Hon.Minister for Health regarding the indefinite strike of Medical students and Junior Doctors of all the Universities and Hospitals in the State.

CALLING ATTENTION TO A MATTERS OE URGENT PUBUIC IMPORTANCE

re.–Indefinate Strike of Junior Doctors in Hospitals and medical Students of all the Universities in the State.

SRI A. LAKSHMISAGAR.—Sir, I call the attention of the Minister for Health and family Welfare to the indefinate strike of Medical students and Junior Doctors of all the Universities and Hospitals in the State.

SRI A.K. ABDUL SAMAD.—Sir, I wish to make the following Statement:

It is a fact that the Junior Doctors and the Medical College Students have been on strike in the State since December 1980. Their strike is against the permission granted by the Government to start the Kempegowda Medical College. Bangalore and Dr.Ambedkar Medical College. Bangalore and also for the abolition of the capitation fee seats in the other private Medical Colleges where the system of collection of capitation fee exists.

So far as the situation in the Colleges are concerned, the students have not been attending the classes except at Kasturba Medical College, Manipal, Students in the Medical Colleges in the Jurisdictions of Bangalore and Mysore Universities with the exception of Kasturba Medical College Manipal Section have also not taken the public examinations that started on 27th and 28th January 1981 respectively.

So far as the situation in the Hospitals are concerned, there has been some obstruction to the working of these institutions off and on by those persons who are on strike. At present all the hospitals attached to the Medical Colleges have been functioning satisfactorily except the hospitals at Belgaum and Gulbarga. In these two hospitals, the doctors other than Heads of the Departments and

the Senior Staff are not allowed by those on strike to attend the hospitals. However the working in these hospitals has been carried on with the available staff, taking care that all the serious and emergency cases are attended to. Naturally there has been some dislocation in the Out-patient Department and in the routine inpatient care.

In order to restore normalcy, the Chief Minister, along with his cabinet collegues and Senior Officers held two rounds of discussions. on two different occasions, during the strike period, with the representatives of the doctors and students on strike. On both the occasions these representatives were heard fully. It was clarified to them that the Government have got an open mind and they will take into consideration all the factors that have been brought out by them and also all other factors relevant for taking appropriate decisions. The desirability of calling off the strike to create a conjenial atmosphere for further discussions and also to create public confidence by removing the hardships caused to them due to the strike was also impressed upon them.

However the strike was not called off. In spite of this, the Government have constituted a Committee to go into all aspects of the entire question and to give their recommendations.

(SRI S. MUNIRAJU in the Chair)

SRI A. LAKSHMISAGAR.—Sir, at the very outset, I must congratulate the Junior Doctors and the Medical students who have been on strike for the last nearly 2 months. They have conducted themselves in a very peaceful manner and in a very effective manner and they have been able to press their buoyancy in a dignified manner and in a telling manner. I am only sorry that the Government has not been able to grasp the implications of the strike and the issues involved and posed by the students and the junior Doctors. Sir, the matter has been agitating the minds of the public, patients Doctors and Medical Instiutions all over the State and the students and Junior Medical Doctors in particular. But all the same, the Government for the last 2 months has not been able to resolve the issue and the resultant situation is that the strike by the Junior Doctors and students has caused immense harm to the patient-public and number of other persons connected thereto. I really do not know the difficulty that the Government has in resolving this issue. I do not want to go into the various details which are relevant to the issue but I must point out the most striking points that are involved in this matter. Sir, there are thirteen medical colleges in Karnataka the highest in

the country–this is the striking feature of the proliferation of medical colleges in our State and in granting recognition to these medical colleges all the rules and regulations under the Karnataka Universities Act and other rules and regulations governing the recognition have been thrown into dust bin are there and some more are yet to come if we take the Hon'ble Chief Ministers words seriously. They have also flouted the injections issued by the Indian Medical Council and proliferation of medical institution is not based on reasonable and rationale considerations governing the establishment of medical college. The medical colleges have been sanctioned without regard to student-patient ratio without regard to teaching facilities available and other infrastructural facilities, so much so the medical graduates who comes out of the University will not be fully trained, useful citizens to the community. Sir, I have been myself a teacher but not in a medical college. If medical college or any other college is opened indiscriminately without any need for it, itultimately results in sub-standard education and if medical education is reduced to sub-standard education the generality of the public will suffer from it. If a lawyer commits mistake anappeal is provided for under the law 3 appeals are provided *ie,* upto Supreme Court if it fails there 1-00 for the non-performance of the lawyer the client may suffer and he may lose money or property. If half backed doctor comes out of the university patient will die and there is no appeal provided for that. This unfortunate situation that is likely to occur, is entirely due to callous attitude of the Government in indiscriminately granting recognition to new medical colleges.

Sir, these medical colleges have become money spinners. They have been completely commercialised and communalised I have been labouring and studying lot of literature and met quite a number of experienced doctors and other experts–none of them has been able to give any satisfactory explanation behind move of the Government in indiscriminately starting medical colleges. Todays situation is whoever asks for permission to start medical colleges they are all accorded wite sanction. This statement has not been denied by the Chief Minister or his spokesman. This is sheer madness and I find no other expression for it. In case the capitation fee is abolished most of these institutions will have to be closed down and the capitation fee is the single biggest fact behind the more for new Medical colleges Sir, is it possible to a common man to pay the capitation fee ranging from 1½ lakhs to 2½ lakhs? Can he go there? If I have 2½ lakhs I would have put it in a fixed deposit and be happy with the interest that I may be able to get from it. The present medical colleges with huge capitation fee only cater to the

needs of the affluent members of the society, they only cater to those greedy persons who wants to a mass wealth in the name of medical education. Sir, may I know who are the persons getting education in these medical institutions? I would like to tell this House that most of the students admitted to th se colleges are from outside and they are provided with clinical facilities and other facilities. All those persons who come from outside the State and other foreign countries, afrer getting the degree, do not serve in our State owing to callous attitude of the Government, medical students and junior doctors are on strike, and patients are suffering Only urgent cases are attended by the skeleton staff available. They are not asking for anything which is unacceptable. They are asking for all legitimate things. If you have the courage, if you have the well being of the people the Government should have been accepted them long long ago.

Sir, the striking doctors and medical students have been pressing for their demands. They had a big charter of demands, but now their demands have been reduced to three, namely, 1) abolition of capitation fee, (2) nationalisation of Medical Colleges and (3) open more hospitals and improve existing hospital facilities. These are the three demands, Any sensible Government should immediately accept them and put an end to this.

Further sir, I have a copy of the statement made by the Hon. Health Minister on the floor of the House on 23rd July 1980 with regard to the allotment of seats, capitation fee etc. Though it was made under a different situation, I should like to pose before him the following points. If these points are accepted, I believe, medical students will call off their strike. They are,

(1) normal set up by the Indian Medical Council and the University should be followed while opening a new medical college ;

(2) new medical colleges to be started only after the prior approval of the concerned universities under w ich buy are going to be established ;

(3) if the capitation fee is not abolished, as the Chief Minister has been insistently saying, atleast 65% of the seats must be earmarked for general pool. Of these 65%, 10% reserve for Scheduled Castes and Scheduled Tribes whose capitation fee must be paid by the Government ; and

(4) 20% of the seats must be reserved for Karnataka State boys and girls. The remaining 15% of the seats must be given to the respective managements.

Sir, after the debate on 23rd July 1980 on the same days the Hon. Minister for Health had convened a meeting of all the leaders of parties wherein among other things, one of the points that was agreed to us that from this acadamic year of 1981-82 onwards, there must be regionalisation of admissions on University basis which would help in giving greater representation to economically weaker sections and backward classes of those regions.

Lastly, I would request the Government to provide more facilities, more hospitals so that the new doctors may be able to find improvement in those places. Sir, as many as 1200 doctors are passing out every year, from all these medical colleges. According to official figures, there are as many as 8000 unemployed trained medical graduates. This is the unfortunate situation that exists to-day, but unfortunately the Government is sleeping over the matter. It is better the Government wake up atleast now; otherwise, I am sure, the situation will go out of control. The Government will be doing a very great service, if these conditions are accepted. Nobody can take an exception to the points I have placed before the Government for acceptance. That's all my submission, sir. Thank you very mush.

೪-೦೦ ಪಿ.ಎಂ.

ಶ್ರೀ ಎಂ. ಚಂದ್ರಶೇಖರ್ (ಜಯನಗರ).—ಮಾನ್ಯ ಅಧ್ಯಕ್ಷರೆ, ಈಗ ಇಲ್ಲಿ ವೈದ್ಯಕೀಯ ಕಾಲೇಜುಗಳನ್ನು ತೆರೆಯುವುದರಲ್ಲಿ ಸರ್ಕಾರದ ಒಂದು ನೀತಿಯ ಬಗ್ಗೆ ಪ್ರಶ್ನೆ ಬಂದಿದೆ. ಹೆಚ್ಚಿನ ಸಂಖ್ಯೆಯಲ್ಲಿ ಕಾಲೇಜುಗಳನ್ನು ತೆರೆಯುವುದರಲ್ಲಿ ಈಗಿನ ವಿದ್ಯಾರ್ಥಿಗಳಿಗಾಗಲೀ ಅಥವಾ ಜೂನಿಯರ್ ಡಾಕ್ಟರುಗಳಿಗಾಗಲೀ ಏನೂ ಆಕ್ಷೇಪಣೆ ಅಷ್ಟಾಗಿ ಇಲ್ಲ. ಅವರ ಆಕ್ಷೇಪಣೆ ಏನೆಂದರೆ, ಕ್ಯಾಪಿಟೇಷನ್ ಫೀ ಹಾಕಿ ಸುಮಾರು ೯೦ ಪರ್ಸೆಂಟ್ ಸೀಟುಗಳನ್ನು ಏನು ನಾವು ಕೊಡುತ್ತಿದ್ದೇವೆ ಅದನ್ನು ತಪ್ಪಿಸಬೇಕೆಂದು. ಒಂದು ವೈದ್ಯಕೀಯ ಕಾಲೇಜು ಪ್ರಾರಂಭವಾದಾಗ ಅದು ತನ್ನ ಎಲ್ಲ ಪೂರ್ಣ ಸಲಕರಣೆಗಳನ್ನು ಹೊಂದಿಸಿಕೊಳ್ಳಬೇಕಾದರೆ ಅದಕ್ಕೆ ಸುಮಾರು ೪೦ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಅದು ಖಾಸಗಿ ಕಾಲೇಜೇ ಆಗಲಿ ಅಥವಾ ಸರ್ಕಾರೀ ಕಾಲೇಜೇ ಆಗಲಿ ಅದು ಪ್ರಾರಂಭವಾಗಬೇಕಾದರೆ ಸುಮಾರು ೪೦ ಕೋಟಿ ರೂಪಾಯಿಗಳ ಸಂಪನ್ಮೂಲಗಳನ್ನು ಒದಗಿಸಿಕೊಳ್ಳಬೇಕು. ಇಲ್ಲದಿದ್ದರೆ ಐಎಂಸಿ ಮನ್ನಣೆ ಕೊಡುವುದಿಲ್ಲ. ವಿಶ್ವವಿದ್ಯಾನಿಲಯದವರೂ ಮನ್ನಣೆ ಕೊಡುವುದಿಲ್ಲ. ಈಗ ಹೆಚ್ಚು ಕಾಲೇಜುಗಳ ಅವಶ್ಯಕತೆ ಇದೆಯೇ ? ಇದನ್ನು ಸರ್ಕಾರ ತೀರ್ಮಾನ ಮಾಡಬೇಕು. ಈಗಾಗಲೇ ಸುಮಾರು ೮,೦೦೦ ಜನ ನಿರುದ್ಯೋಗಿ ವೈದ್ಯರು ಇರುವಾಗ ಇನ್ನೂ ಹೆಚ್ಚಿಗೆ ನಮ್ಮ ಭಾಗದಲ್ಲಿ ವೈದ್ಯಕೀಯ ಕಾಲೇಜುಗಳನ್ನು ತೆರೆಯಬೇಕೇ ? ಹೀಗೆ ತೆರೆಯಲು ಸರ್ಕಾರದ ಪತಿಯಿಂದ ಸುಮಾರು ೪೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಆಗುವುದಿಲ್ಲವೆಂದರೆ ಖಾಸಗೀ ಸಂಸ್ಥೆಗಳಿಗೆ ಅಥವಾ ಯಾರು ವೈದ್ಯಕೀಯ ಕಾಲೇಜುಗಳನ್ನು ತೆರೆಯಬೇಕೆಂದು ಮುಂದೆ ಬರುತ್ತಾರೆಯೋ ಅವರಿಗೆ ಇಷ್ಟು ಕ್ಯಾಪಿಟೇಷನ್ ಮೂಲಕ ಹಣವನ್ನು ವಿದ್ಯಾರ್ಥಿಗಳಿಂದ ವಸೂಲು ಮಾಡಿ ಕಾಲೇಜು ತೆರೆಯಲು ಅನುಮತಿ ಕೊಡಬೇಕು. ಅವರು ಇಷ್ಟು ವರ್ಷಗಳವರೆಗೆ ಮಾತ್ರ ಕ್ಯಾಪಿಟೇಷನ್ ಫೀ ವಸೂಲಿ ಮಾಡಬೇಕೆಂದು ಕಾಲ ನಿಗಧಿ ಮಾಡಬೇಕಾಗುತ್ತದೆ. ೪ ಅಥವಾ ೫ ವರ್ಷಗಳೆಂದು ನಿಗಧಿ ಮಾಡಿ ಆ ನಂತರ ಸರ್ಕಾರದ ನಿಯಮದ ಪ್ರಕಾರವಾಗಿ ವಿದ್ಯಾರ್ಥಿಗಳಿಗೆ ಸ್ಥಾನ ಕೊಡುವಂತೆ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ಈ ರೀತಿ ಇವತ್ತು ಸೆಂಟ್‌ಜಾನ್ ಮೆಡಿಕಲ್ ಕಾಲೇಜಿನವರಾಗಲೀ, ಅಥವಾ ಮಣಿಪಾಲ್ ಮೆಡಿಕಲ್ ಕಾಲೇಜಿನವರಾಗಲೀ ಅವುಗಳನ್ನು ತೆರೆದು ೫ ವರ್ಷಗಳಿಗೂ ಮೇಲ್ಪಟ್ಟು ವರ್ಷಗಳಾಗಿದ್ದರೂ

ಅಲ್ಲಿ ಹಳೆಯ ನಿಯಮವನ್ನೇ ಪಾಲಿಸಿಕೊಂಡು ಹೋಗುತ್ತಿದ್ದಾರೆ. ಆ ವ್ಯವಸ್ಥೆಯೇ ಇನ್ನೂ ನಡೆಯುತ್ತಾ ಇದೆ. ಅಲ್ಲಿಯ ಸಂಸ್ಥೆಗಳು ಐಎಂಎಸ್ ಸ್ಟ್ಯಾಂಡರ್ಡ್‌ಗೆ ಎಲ್ಲಾ ಸಲಕರಣೆಗಳನ್ನು ಹೊಂದಿದ್ದರೂ ಕ್ಯಾಪಿಟೇಷನ್ ಫೀಸನ್ನು ಇನ್ನೂ ಡೊನೇಷನ್ ಮೂಲಕವೇ ಏಕೆ ಒಗಿಸಬೇಕು ? ಆದುದರಿಂದ ಹೊಸ ಮೆಡಿಕಲ್ ಕಾಲೇಜುಗಳನ್ನು ಪ್ರಾರಂಭ ಮಾಡುವುದಕ್ಕೆ ಅವಕಾಶ ಕೊಟ್ಟಾಗ ಅವರುಗಳು ಇಷ್ಟು ವರ್ಷಗಳ ಕಾಲ ಮಾತ್ರ ಕ್ಯಾಪಿಟೇಷನ್ ಫೀ ತೆಗೆದುಕೊಳ್ಳಬೇಕೆಂದು ನಿಗಧಿ ಮಾಡ ಬೇಕು.

ಇನ್ನು ಎರಡನೆಯದಾಗಿ, ಈ ಖಾಸಗೀ ಜನರಿಗೆ ಕಾಲೇಜುಗಳನ್ನು ತೆರೆಯಲು ಅವಕಾಶವನ್ನು ಕೊಡುವಾಗ ಇವನ್ನು ತೆರೆಯಲು ವೈಯಕ್ತಿಕ ವ್ಯಕ್ತಿಗಳಿಗೆ ಕೊಡಬೇಕೇ ಅಥವಾ ಯಾವುದಾದರೂ ಒಂದು ಸಂಸೆ ಯಲ್ಲಿ ಸೇವೆ ಮಾಡಿ ವಿದ್ಯಾ ಕ್ಷೇತ್ರದಲ್ಲಿ ಒಳ್ಳೆಯ ಸೇವೆ ಸಲ್ಲಿಸಿರುವಂತಹ ವ್ಯಕ್ತಿಗೆ ಕೊಡ ಬೇಕೇ ಅಥವಾ ಯಾವುದಾದರೂ ಸಂಸ್ಥೆಗಳು ದಕ್ಷತೆಯಿಂದ ಇನ್ನಿತರ ಕಾಲೇಜುಗಳನ್ನು ನಡೆಸುತ್ತಿರು ವಂತಹ ಸಂಸ್ಥೆಗಳಿಗೆ ಆದ್ಯತೆಯನ್ನು ಅವುಗಳ ಮುಂದೆ ಬಂದಾಗ ಕೊಡಬೇಕೇ ಅಥವಾ ಯಾವುದೋ ಒಬ್ಬ ವ್ಯಕ್ತಿ ಲಕ್ಷದ ಆರವತ್ತು ಸಾವಿರ ರೂಪಾಯಿಗಳ ಕ್ಯಾಪಿಟೇಷನ್ ಫೀನಿಂದ ಕೋಟ್ಯಾಂತರ ರೂಪಾಯಿಗಳು ಬರುತ್ತವೆ ಎಂಬ ದೃಷ್ಟಿಯಿಂದ ಕಾಲೇಜು ಸ್ಥಾಪಿಸಲು ಮುಂದೆ ಬಂದಾಗ ಅಂತಹ ವ್ಯಕ್ತಿಗೆ ಆದ್ಯತೆ ಕೊಡಬೇಕೇ ? ಇದನ್ನು ಸರ್ಕಾರದವರು ತೀರ್ಮಾನ ಮಾಡಬೇಕಾಗುತ್ತದೆ.

ಇನ್ನು ಮೂರನೆಯದಾಗಿ, ಈಗ ಕರ್ನಾಟಕದಲ್ಲಿಯಲ್ಲದೇ ಬೇರೆ ಯಾವ ರಾಜ್ಯಗಳಲ್ಲಿಯೂ ಖಾಸಗೀ ಸಂಸ್ಥೆಗಳಿಂದ ನಡೆಸುತ್ತಿರತಕ್ಕಂತಹ ವೈದ್ಯಕೀಯ ಕಾಲೇಜುಗಳು ಇಲ್ಲ. ಇಲ್ಲಿ ಸುಮಾರು ಆರರಿಂದ ಏಳು ಕಾಲೇಜುಗಳು ಹೊಸದಾಗಿ ಇನ್ನೆರಡೂ ಸೇರಿ ಒಟ್ಟು ಎಂಟು ಕಾಲೇಜುಗಳಾಗುತ್ತವೆ. ಇಷ್ಟಲ್ಲದೆ ಇನ್ನೂ ಸುಮಾರು ೧೩ ವೈದ್ಯಕೀಯ ಕಾಲೇಜುಗಳನ್ನು ತೆರೆಯುವುದಕ್ಕೆ ಸರ್ಕಾರದ ಪರಿ ಶೀಲನೆಗೆ ಬಂದಿದೆ ಎಂದು ತಿಳಿದು ಬಂದಿದೆ. ಕೇಳಿದವರಿಗೆಲ್ಲಾ, ಜಿಲ್ಲೆಗೊಂದರಂತೆ ಪ್ರದೇಶಕ್ಕೊಂದರಂತೆ ಅಥವಾ ಯಾವುದೋ ವ್ಯಕ್ತಿಗೆ, ಸಂಸ್ಥೆಗೆ ಕಾಲೇಜು ಸ್ಥಾಪನೆಗೆ ಪರವಾನಿಗೆ ಕೊಡಬೇಕು ಎಂದು ಬಂದಾಗ ಕಾಲೇಜುಗಳು ಹೆಚ್ಚಾಗಿ ಇದರಿಂದ ಹೊರ ಬರತಕ್ಕಂತಹ ವೈದ್ಯರುಗಳ ಕೈಯ್ಯಲ್ಲಿ ನಮ್ಮ ದೇಶದ ಮುಂದಿನ ಜನರ ಜೀವವನ್ನೇ ಕೊಡಬೇಕಾಗುತ್ತದೆ. ಆದ್ದರಿಂದ ನಿಯಮವನ್ನು ಪಾಲನೆ ಮಾಡಿಕೊಂಡು ಅವಕ್ಕೆ ಬೇಕಾದ ಸಲಕರಣೆಗಳನ್ನು ಹೊಂದಿಸಿಕೊಳ್ಳತಕ್ಕಂತಹ ಸಂಸ್ಥೆಗಳಿಗೆ ಕಾಲೇಜು ತೆರೆಯಲು ಪರವಾನಿಗೆ ಕೊಡಬೇಕಾಗುತ್ತದೆ.

ಕೊನೆಯದಾಗಿ ಈಗಿನ ಪರಿಸ್ಥಿತಿಯಲ್ಲಿ ಮೆಡಿಕಲ್ ಕಾಲೇಜುಗಳ ಅವಶ್ಯಕತೆ ಇರುವುದೋ ಇಲ್ಲವೋ ಎಂಬುದನ್ನು ಮೊದಲು ಸರ್ಕಾರ ತೀರ್ಮಾನ ಮಾಡಬೇಕು. ಇನತ್ತು ವಿದ್ಯಾರ್ಥಿಗಳು ಮೆಡಿಕಲ್ ಕಾಲೇಜುಗಳನ್ನು ರಾಷ್ಟ್ರೀಕರಣ ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ೫ ವರ್ಷಗಳೊಳಗೆ ಪೂರ್ಣವಾಗಿ ಎಲ್ಲಾ ಸಲಕರಣೆಗಳನ್ನು ಪಡೆದುಕೊಂಡು ಯಾವುದೇ ರೀತಿಯ ಕ್ಯಾಪಿಟೇಷನ್ ಫೀ ವಸೂಲು ಮಾಡುವುದಕ್ಕೆ ಮುಂದುವರಿಸಿಕೊಂಡು ಹೋಗಲು ಅನುಮತಿ ಕೊಟ್ಟಿರುವುದು ತಪ್ಪು. ಆದರೆ, ಇವತ್ತು ಆವನ್ನೇ ಪರಿಪಾಠ ಮಾಡಿಕೊಂಡು ಹಣ ವಸೂಲು ಮಾಡುವುದಕ್ಕೋಸ್ಕರವೇ ಕಾಲೇಜುಗಳನ್ನು ಪ್ರಾರಂಭ ಮಾಡುವುದು ಸರಿಯಲ್ಲ. ಸರ್ಕಾರವು ಇವುಗಳನ್ನು ಪರಿಶೀಲನೆ ಮಾಡು ವುದರ ಜೊತೆಗೆ ಮುಷ್ಕರ ಹೂಡಿರತಕ್ಕ ವಿದ್ಯಾರ್ಥಿಗಳನ್ನು ಹಾಗೂ ಜೂನಿಯರ್ಸ್ ಡಾಕ್ಟರುಗಳನ್ನು ಕರೆಸಿ ಮಾತನಾಡಬೇಕು. ಮೆಡಿಕಲ್ ಕಾಲೇಜುಗಳ ಸ್ಥಾಪನೆ ಬಗ್ಗೆ ಸರ್ಕಾರ ಒಂದು ನಿರ್ದಿಷ್ಟವಾದ ನೀತಿಯನ್ನು ಹಾಕಿಕೊಳ್ಳಬೇಕೆಂದು ಹೇಳುತ್ತೇನೆ. ಸಭೆಯ ಮೂಲಕ ನಾನು ವೈಯಕ್ತಿಕವಾಗಿ ವಿದ್ಯಾರ್ಥಿಗಳಲ್ಲಿ ಬೇಡಿಕೊಳ್ಳುವುದೇನೆಂದರೆ ಪರೀಕ್ಷೆಗೆ ಬಹಿಷ್ಕಾರ ಹಾಕಿರುವುದು ಸರಿಯಲ್ಲ. ಪರೀಕ್ಷೆಗೆ ಬಹಿಷ್ಕಾರ ಹಾಕುವುದರ ಮೂಲಕ ಸರ್ಕಾರಕ್ಕೆ ಪ್ರತಿಭಟನೆ ಮಾಡುವುದು ಸರಿಯಲ್ಲ, ಒಂದು ವರ್ಷ ಮುಂದೆ ಹೋದರೆ ಅದರ ನಷ್ಟ ತಂದೆತಾಯಿಗಳಿಗೆ ಹಾಗೂ ಪೋಷಕರ ಮೇಲೆ ಬೀಳುತ್ತದೆ. ದಯವಿಟ್ಟು ಪರೀಕ್ಷೆಗೆ ಹಾಜರಾಗಿ ಪ್ರತಿಭಟನೆಯನ್ನು ಬೇರೆ ರೂಪದಲ್ಲಿ ವ್ಯಕ್ತಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಸರ್ಕಾರ ಕೂಡಲೆ ವಿದ್ಯಾರ್ಥಿಗಳನ್ನು ಕರೆಸಿ ಮಾತನಾಡಬೇಕೆಂದು ಕೇಳಿಕೊಳ್ಳುತ್ತೇನೆ.

† B. B. SAYANAK (Belgaum).—Sir, I know there are thirteen colleges in Karnataka which is the highest number in the country. Out of thirteen colleges, four are Government colleges and the remai-

ning nine are private colleges. Four years back, when there was a question about Manipal college and when Sri Siddaveerappa was the Health Minister, he had assured on the floor of the House that the Government would take over all the private medical colleges. That promise is not fulfilled by the Government and they are allowing more private medical colleges. The complaint of the junior doctors and the students is that they are getting the degrees and thus there are 7,000 unemployed doctors. There are also complaints that these private medical colleges are collecting Rs. One lakh or One and a half lakh and Rs. Two lakhs from the foreigners as capitation fee. Why these colleges are there ? The colleges must be for the meritorious, deserving students and not for the foreigners and outsiders. These private medical colleges are charging huge capitation fee. Karnataka is the only state wherein capitation fee is charged. In Maharashtra there is one college in Sholapur. The people and the students agitated and stressed that Sholapur college must be taken over by the Maharashtra Government and accordingly the Government of Maharashtra passed a resolution. There is not even a single private college wherein the capitation fee is charged. In Bihar also, they have stopped private medical colleges. Why these private colleges are existing only in Karnataka ? In the last year also, the students were on strike for ten days and when Ramaiah Medical college was opened, the present Minister for Health Sri Abdul Samad has assured in that meeting that no further medical colleges will be opened Inspite of that assurance, I am unable to understand why the Hon'ble Minister has given two more medical colleges. The University has not given any affiliation to these colleges and even the Indian Medical Council has not given its approval. Why the Government are not observing all the rules and regulations while giving these private medical colleges ? In 1963, there was a Mudaliyar's Commission report. In that report Sri Mudaliyar has stated that for 50 lakhs people, there must be only one medical college. The population of Karnataka is three and a half crores and there must be only five colleges. But you have given 13 colleges. What was the necessity to open so many colleges ? Sir, I am sorry to say that the Hon'ble Helth Minister in his statement has said that at present all the hospitals attached to the medical colleges are not functioning satisfactorily except the hospitals at Belgaum and Gulbarga. Sir, in Belgaum the students and the junior doctors are not allowing the doctors to enter the premises of the hopital on account of which ten patients have died. Who is responsible for this ? The Government are responsible for this.

SRI MALLUR ANANDA RAO.—Is it the responsibility of the Government or the doctors who came in the way of the other doctors ?

SRI B. B. SAYANAK.—It is the responsibility of the Government and the doctors.

CHAIRMAN.—Please cut short your speech.

SRI B.B. SAYANAK.—In Belgaum there are ten deaths in the civil hospitals on account of the non-entrance of the doctors. The doctors have not entered into the hospitals but the Government have not declared their services as essential. I know that doctors are working in Bangalore but it is not so in Belgaum. Is it not the duty of the Government to declare the doctors' job as essential service. If they are not entering the hospitals the Government have every right to take stingent action against the doctors.

SRI A. LAKSHMISAGAR.—Why do you want the question of essential service or stringent action against the doctors ? Why don't you stress stringent action against the Ministers and the Government ? Let them come to some sense in the matter.

SRI B.B. SAYANAK.—I have first taken to task, the Ministers and the Government.

SRI A. LAKSHMISAGAR.—Then it is alright.

SRI B B. SAYANAK.—What is the demand of the students and the doctors ? They do not want the private colleges and they want all the private colleges to be nationlised. If the private colleges are not there, then the capitation fee will go.

The third thing is, in Belgaum the Government has given J. N. Medical College. They are using the Government Hospital. Why the Government has given them permission ? The Government must tell them that they must construct their Hospital. They are not doing that. They are using the Government Hospital and the Doctors are not attending. So, I request the Government that the Government must take the initiative. The Health Minister has stated that a Committee has been constituted and they are awaiting that Commistee's Report. Strikes are going on, and the students have not attended the examination. It is the responsibility of the Government. The Government must take immediate steps and take the students and the Junior Doctors into confidence. The Chief Minister should call a meeting of all the Cabinet Ministers and take a decision that all the Medical Colleges must be nationalised and capitation fees should go. There must be improvement to the hospitals. This should be done immediately. Then only good relation will be there between the doctors and the students and the Government, and there will be a good atmosphere in the State.

SRI M. C. NANAIAH.—Sir, Sri Sayanak has made a plea. I feel that it is his desire that all the medical colleges should be nationalised. Now, I want to know whether it would be possible for the Government to nationalise all the medical colleges, here in the State, more particularly the Colleges which are governed by the minorities, as contempleted under article 30 of the Constitution. If such is the case, can the Government overcome that particular provision of the Constitution ? I think, Sri Sayanak is not aware of it.

SRI B.B. SAYANAK.—I am aware of it.

(Interruptions)

† ಶ್ರೀ ಪಿ. ರಾಂದೇವ್ (ಮಲ್ಲೇಶ್ವರಂ).—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕ ಮೊದಲ ಪ್ಯಾರಾದಲ್ಲಿ ಒಂದು ಮಾತನ್ನು ಹೇಳಿದ್ದಾರೆ. "Their strike is against the permission granted by the Government to start Kempe gowda Medical College, Bangalore & Dr. Ambedkar Medical College, Bangalore." ಸ್ಟೇಟ್‌ಮೆಂಟಿನಲ್ಲಿ ಈ ರೀತಿ ಹೇಳಿರುವುದು ಮಿಸ್‌ಲೀಡಿಂಗ್ ಸ್ಟೇಟ್‌ಮೆಂಟ್ ಆಗುತ್ತದೆ. ತಾವು ಏತಕ್ಕೆ ವಿದ್ಯಾರ್ಥಿಗಳಿಗೆ ಈ ಕಮ್ಯುನಲ್ ಕಲರ್ ಕೊಡಲಿಕ್ಕೆ ಹೋಗುತ್ತೀರಾ ಅರ್ಥವಾಗುತ್ತಾ ಇಲ್ಲ. ಅವರು ಕೊಟ್ಟಿರತಕ್ಕ ಸ್ಟೇಟ್‌ಮೆಂಟ್ ಇಲ್ಲೇ ಇದೆ. ಈಗ ತಾವು ಏನು ಕೆಂಪೇಗೌಡ ಮೆಡಿಕಲ್ ಕಾಲೇಜು, ಡಾ॥ ಅಂಬೇಡ್ಕರ್ ಮೆಡಿಕಲ್ ಕಾಲೇಜು ಕೊಟ್ಟಿದ್ದೀರಾ ಅದಕ್ಕೆ ವಿರೋಧ ಮಾಡುತ್ತೇವೆಂದು ಹೇಳಿಲ್ಲ. ತಾವು ದೊಡ್ಡವರು, ಇದಕ್ಕೆ ಕಮ್ಯುನಲ್ ಟಚ್, ಕಮ್ಯುನಲ್ ಟಿಮ್ರ್ ಕೊಡತಕ್ಕದ್ದು ಒಳ್ಳೆಯದಲ್ಲ ಎಂದು ಸರ್ಕಾರಕ್ಕೆ ತಿಳಿಸಲಿಕ್ಕೆ ಇಷ್ಟಪಡುತ್ತೇನೆ. ಈಗ ತಮ್ಮ ಸ್ಟೇಟ್‌ಮೆಂಟಿನಲ್ಲಿ ಈ ಒಂದು ಸೆಂಟೆನ್ಸ್ ಏನು ಇದೆ ಅದನ್ನು ಹೊಡೆದು ಹಾಕಬೇಕು ಈ ಸಮಸ್ಯೆಗಳನ್ನೆಲ್ಲಾ ತಾವೇ ಮಾಡಿಕೊಂಡಿರತಕ್ಕದ್ದು, ಇವೊತ್ತು ಕಾರ್ಮಿಕರ ಸಮಸ್ಯೆ ಇದೆ, ರೈತರ ಸಮಸ್ಯೆ ಇದೆ. ಇವೊತ್ತು ವಿರೋಧ ಮಾಡಿರತಕ್ಕ ವಿಚಾರಗಳು ಪತ್ರಿಕೆಯಲ್ಲಿ ಬಂದಿದೆ. ಅಕಾಡಮಿಕ್ ಕೌನ್ಸಿಲ್, ಸೆನೆಟ್, ಸಿಂಡಿಕೇಟ್, ಯೂನಿವರ್ಸಿಟಿ ಅವರೆಲ್ಲಾ ವಿರೋಧ ಮಾಡಿದ್ದಾರೆ. ಅದು ಪತ್ರಿಕೆಯಲ್ಲಿ ಬಂದಿದೆ. ಅದರ ಬಗ್ಗೆ ಯಾರೂ ಅಲ್ಲಗಳೆದಿಲ್ಲ. ಬೆಂಗಳೂರು ಯೂನಿವರ್ಸಿಟಿ ಸೈನ್ಸ್ ಫ್ಯಾನ್ಸಲರ್ ಅವರು ಕೂಡ ಸರ್ಕಾರಕ್ಕೆ ವಾರನ್ ಮಾಡಿದ್ದಾರೆ. ಇನ್ನು ಕರ್ನಾಟಕ ಸರ್ಕಾರದವರು ಮಾಡಿರತಕ್ಕ ಕಮಿಟಿ ಏನಿದೆ, ಕೆ.ಎನ್. ರಾಜ್ ಮತ್ತು ಜಗನ್ನಾಥ ರೆಡ್ಡಿ ಅವರು ಕೂಡ ಇದು ಸರಿಯಲ್ಲ ಎಂದು ಹೇಳಿದ್ದಾರೆ. ಇಂಡಿಯನ್ ಮೆಡಿಕಲ್ ಅಸೋಸಿಯೇಷನ್ ಅವರು ಕೂಡ ಇದು ಬೇಡ ಎಂದು ಹೇಳಿದ್ದಾರೆ. ನೀವು ಮಾಡಿರತಕ್ಕ ಕಮಿಟಿಯವರು ಬೇಡ ಎಂದು ಹೇಳಿದ್ದಾರೆ. ಅಕಾಡಮಿಕ್ ಕೌನ್ಸಿಲ್ ಚಿಲುವರಾಜ್ ಮತ್ತು ರಾಮಕೃಷ್ಣ ಅವರು ಕೂಡ ಬೇಡ ಎಂದು ಹೇಳಿದ್ದಾರೆ. ಮೆಡಿಕಲ್‌ಗೆ ಸಂಬಂಧಪಟ್ಟಂತೆ ಡೈರೆಕ್ಟರ್ ಅವರು ಬೇಡ ಎಂದು ಹೇಳಿದ್ದಾರೆ. ಎಲ್ಲರೂ ಹೇಳಿದ ಮೇಲೆ ಯೂನಿವರ್ಸಿಟಿ, ಸಿಂಡಿಕೇಟ್, ಸೆನೆಟ್, ವಿದ್ಯಾರ್ಥಿಗಳು, ಜೂನಿಯರ್ ಡಾಕ್ಟರುಗಳು, ಪತ್ರಿಕೆಗಳು ಬೇಡ ಎಂದು ಹೇಳಿದ್ದಾರೆ. ಇಷ್ಟೆಲ್ಲಾ ಹೇಳಿದ್ದರೂ ತಾವು ಮನಸ್ಸಿಗೆ ಬಂದಂತೆ ಮೆಡಿಕಲ್ ಕಾಲೇಜಿಗೆ ಪರ್ಮಿಷನ್ ಕೊಡುವುದಕ್ಕೆ ಅವರು ವಿರೋಧ ಮಾಡಿದ್ದಾರೆ. ಈಗ ತಮಾಷೆ ಯಾವ ರೀತಿ ಮಾಡುತ್ತಿದ್ದಾರೆ ಎಂದರೆ ಅಸೆಂಬ್ಲಿಯಲ್ಲಿ ಅನೇಕರಿಗೆ ಮಂತ್ರಿಗಳ ಪದವಿ ಬೇಕು ಇಲ್ಲ ಮೆಡಿಕಲ್ ಕಾಲೇಜು ಬೇಕು ಈ ರೀತಿ ತಮಾಷೆ ಮಾಡುತ್ತಿದ್ದಾರೆ. ಈ ಇವೆರಡರಲ್ಲಿ ಒಂದು ಕೊಟ್ಟರೆ ಸಾಕು ಎಂದು ಹೇಳುತ್ತಾರೆ. ಈ ರೀತಿ ಮಾಡುವುದು ಸರಿಯಲ್ಲ. ಈಗ ಎರಡು ಮೂರು ಕಾಲೇಜಿಗೆ ಪರ್ಮಿಷನ್ ಕೊಟ್ಟಿದ್ದೀರಿ. ಉಳಿದ ಕಾಲೇಜುಗಳಿಗೆ ಪರ್ಮಿಷನ್ ಕೊಡುವ ಬಗ್ಗೆ ಒಂದು ಕಮಿಟಿ ಮಾಡಿದ್ದೀರಿ. ಆ ಕಮಿಟಿ ರಿಪೋರ್ಟ್ ಬರುವವರೆಗೆ ಹೊಸ ಮೆಡಿಕಲ್ ಕಾಲೇಜುಗಳನ್ನು ಕೊಡುವುದಿಲ್ಲ ಎಂದು ಹೇಳಬಹುದು. ಈಗ ಏನಾಗಿದೆ ಎಂದರೆ, ನೀವು ಕೊಡತಕ್ಕ ವೇಗವನ್ನು ನೋಡಿದರೆ ನಾಳೆ ದಿವಸ ನಿಮಗೆ ಡೆಡ್ ಬಾಡಿ ಕೂಡ ಸಿಕ್ಕುವುದಿಲ್ಲ. ಜನಗಳನ್ನು ಕೊಂದು ಕೊಡಬೇಕಾಗುತ್ತದೆ. ಅಷ್ಟು ವೇಗದಲ್ಲಿ ಹೋಗುವುದು ಒಳ್ಳೆಯದಲ್ಲ ಎಂದು ಹೇಳುತ್ತೇನೆ. ಈ ಸಮಸ್ಯೆ ಇನ್ನಷ್ಟು ಲಾಭ ಉದ್ಭವವಾಗುವುದಕ್ಕೆ ಅವಕಾಶ ಕೊಡಬಾರದು. ನಿರುದ್ಯೋಗ ಸಮಸ್ಯೆ ಜಾಸ್ತಿ ಇದೆ. ಡಾಕ್ಟರುಗಳು ಬೀದಿಗೆ ಬಂದಿದ್ದಾರೆ. ಆದುದರಿಂದ ತಾವು ಒಂದು ಸೈಂಟಿಫಿಕ್ ಬೇಸಿಸ್ ಮೇಲೆ ವಿಚಾರ ಮಾಡಬೇಕೆಂದು

ಹೇಳುತ್ತೇನೆ. ಈಗಾಗಲೇ ವಿದ್ಯಾರ್ಥಿಗಳು ಬಹಿಷ್ಕಾರ ಹಾಕಿದ್ದಾರೆ. ದಯವಿಟ್ಟು ಇನ್ನೊಂದು ಸಾರಿ ಅವರನ್ನು ಕರೆದು ಇದನ್ನು ಕಮಿಟಿಗೆ ಬಿಟ್ಟುಬಿಡೋಣ ಅಲ್ಲಿಯವರೆಗೂ ಯಾವ ಮೆಡಿಕಲ್ ಕಾಲೇಜನ್ನು ಕೊಡುವುದಿಲ್ಲ ಎಂದು ಹೇಳಿದರೆ ಅವರು ಪಾಪಸ್ಸು ತೆಗೆದುಕೊಳ್ಳುತ್ತಾರೆ. ಇವೊತ್ತು ಅವರು ಕೇಳಿರತಕ್ಕ ಬೇಡಿಕೆಯಲ್ಲಿ ಕ್ಯಾಪಿಟೇಷನ್ ಫೀಜು ಇದೆ. ಇದು ನೂರಕ್ಕೆ ತೊಂಭತ್ತೈಂಟು ಜನ ಹೊರಗಡೆಯವರಿಗೋಸ್ಕರ ಇದೆ. ಇದನ್ನು ರದ್ದುಮಾಡಿ ಅವರು ಕೇಳಿರತಕ್ಕ ಬೇಡಿಕೆಯನ್ನು ಒಪ್ಪಿಕೊಳ್ಳಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಹೆಚ್. ಡಿ. ದೇವೇಗೌಡ (ಹೊಳೀನರಸೀಪುರ).—ಅಧ್ಯಕ್ಷರೆ, ರಾಜ್ಯದ ಶಾಂತಿಯನ್ನು ಕದಲಿಸತಕ್ಕ, ಸಾಮಾನ್ಯ ಜನತೆಯ ಆರೋಗ್ಯಕ್ಕೆ ಇವೊತ್ತು ಧಕ್ಕೆ ತರತಕ್ಕ ರೀತಿಯಲ್ಲಿ ಮುಷ್ಕರ ಏನು ನಡೆಯುತ್ತಿದೆ ಇದರ ಬಗ್ಗೆ ಸ್ವಲ್ಪ ಮಾತನಾಡಬೇಕಾಗುತ್ತದೆ. ಮೆಡಿಕಲ್ ಕಾಲೇಜುಗಳನ್ನು ಕೊಡಬೇಕೆಂದು ಕೇಳಿದವರಲ್ಲಿ ನಾನು ಒಬ್ಬ. ನನಗೆ ಸತ್ಯವನ್ನು ಮುಚ್ಚಿಡಲಿಕ್ಕೆ ಸಾಧ್ಯವಿಲ್ಲ. ಈ ಎರಡು ಮೆಡಿಕಲ್ ಕಾಲೇಜುಗಳು ಪ್ರಾರಂಭವಾದ ಮೇಲೆ ಕರ್ನಾಟಕದಲ್ಲಿ ಏನು ಒಂದು ತರಹ ಭೂಗಿಲು ಎದ್ದಿದೆ. ರಾಜ್ಯದಲ್ಲಿ ಖಾಸಗಿ ಮೆಡಿಕಲ್ ಕಾಲೇಜುಗಳನ್ನು ಹಿಂದೆ ಮಾಡಲಿಲ್ಲವೇ ? ಹೋದ ವರ್ಷ ಖಾಸಗಿ ವ್ಯಕ್ತಿ ಮೆಡಿಕಲ್ ಕಾಲೇಜು ಮಾಡಿದಾಗ ರಾಜ್ಯದಲ್ಲಿ ಯಾರೂ ಆಂದೋಳನ ಮಾಡಲಿಲ್ಲ. ನಾವೆಲ್ಲರೂ ಶಾಸಕರಾಗಿ ಇಲ್ಲಿಯೇ ಕುಳಿತ್ತಿದ್ದೆವು, ಯಾರೂ ಮಾತನಾಡಲಿಲ್ಲ. ಇವೊತ್ತು ಯಾವುದೋ ಎರಡು ಸಂಸ್ಥೆಯವರು ಮಾಡಿದಾಗ ಪ್ರಚೋದನೆ ಮಾಡುವುದಾದರೆ, ಕರ್ನಾಟಕದಲ್ಲಿ ಅದಕ್ಕೆ ನೂರು ಪಟ್ಟು ಪ್ರಚೋದನೆ ಮಾಡುವುದಕ್ಕೆ ಶಕ್ತಿ ಇದೆ, ಇನ್ನು ಉದ್ಯೋಗದ ಬಗ್ಗೆ ಮಾತನಾಡುವುದಾದರೆ, ತಾಂತ್ರಿಕ ವಿದ್ಯಾಭ್ಯಾಸದಲ್ಲಿ, ಇಂಜೀಯರಿಂಗ್ ಕಾಲೇಜುಗಳು, ಪಾಲಿಟೆಕ್ನಿಕ್ ಕಾಲೇಜುಗಳನ್ನು ಎಷ್ಟು ಕೊಟ್ಟಿದ್ದೀರಿ ಯಾವ ಯಾವ ಜಾತಿಯಲ್ಲಿ ಕೊಟ್ಟಿದ್ದೀರಿ. ಅಲ್ಲಿ ಕ್ಯಾಪಿಟೇಷನ್ ಫೀ ಇಲ್ಲವೇ ? ಬಿ.ಎಡ್. ಕಾಲೇಜುಗಳನ್ನು ತೆಗೆದುಕೊಳುತ್ತಾ ಇಲ್ಲವೇ ? ಈಗ ಏನಾಗಿದೆ ಎಂದರೆ ಬೆಳಿಗ್ಗೆಯಿಂದ ಸಾಯಂಕಾಲದ ವರೆಗೂ ರಾಜಕೀಯ ಮಾಡುವುದೇ ಆಗಿದೆ. ಆದ್ದರಿಂದ ಈ ವಿಚಾರದಲ್ಲಿ ಸರ್ಕಾರದವರು ಸರಿಯಾದ ನಿಲುವನ್ನು ತಾಳದೇ ಹೋದರೆ ಭೀಕರವಾದ ಪರಿಣಾಮ ಉಂಟಾಗುತ್ತದೆ. ಇನ್ನು ಆನ್‌ಎಂಪ್ಲಾಯ್‌ಮೆಂಟ್ ಪ್ರಾಬ್ಲಮ್ ವಿಚಾರ ಹೇಳುವುದಾದರೆ, ಇಂಜಿನೀಯರ್ ಪದವೀಧರರು ಆನ್‌ಎಂಪ್ಲಾಯ್ಡ್ ಇದ್ದಾರೆ. ಸಾಮಾನ್ಯ ವಿದ್ಯಾಭ್ಯಾಸ ಮಾಡಿ ಕೊಂಡಿರತಕ್ಕವರಲ್ಲಿಯೂ ಆನ್‌ಎಂಪ್ಲಾಯ್ಡ್ ಜಾಸ್ತಿ ಇದ್ದಾರೆ. ಆದರೆ ಈ ಒಂದು ವಿಚಾರದಲ್ಲಿ ಸಾಕಷ್ಟು ರಾಜಕೀಯ ಇದೆ. ಈ ಎರಡು ಸಮಾಜದವರು ವೈದ್ಯಕೀಯ ಕಾಲೇಜುಗಳನ್ನು ತೆರೆಯುತ್ತಿರುವುದರಿಂದ, ಡಾಕ್ಟರುಗಳು ಹೆಚ್ಚು ಇದ್ದಾರೆ ಎಂದು ಹೇಳುತ್ತಿದ್ದಾರೆ. ಈ ತರಹ ಹೇಳಿದರೆ, ಪಾಲಿಸಿ ಏನಿದೆ ಎನ್ನುವುದನ್ನು ನೋಡಬೇಕಾಗುತ್ತದೆ. ನಮ್ಮಲ್ಲಿ ಎಷ್ಟು ಹುದ್ದೆಗಳು ಖಾಲಿ ಬೀಳುತ್ತದೆ ಅಷ್ಟು ಜನ ಪದವೀಧರರನ್ನು ಇನ್ನು ಮುಂದೆ ಪ್ರೊಡ್ಯೂಸ್ ಮಾಡಬೇಕಾಗುತ್ತದೆ. ಇವೊತ್ತು ಇಂಜಿನಿಯರಿಂಗ್ ಕಾಲೇಜು, ಪ್ರೈವೇಟ್ ಕಾಲೇಜು, ಜನರಲ್ ಎಜುಕೇಷನ್‌ಗೆ ಸಂಬಂಧಪಟ್ಟಂತೆ ಪ್ರೈಮರಿ, ನರ್ಸರಿ, ಇವುಗಳೆನ್ನೆಲ್ಲಾ ನ್ಯಾಷನಲೈಸ್ ಮಾಡುವುದಾದರೆ ನಾನು ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ಎರಡು ಕಾಲೇಜುಗಳಿಗೋಸ್ಕರ ಮಾಡುತ್ತಿದ್ದಾರೆ ಅಂದರೆ ಅದಕ್ಕೆ ಪ್ರತಿಯಾದ ಚಳುವಳಿ ಮಾಡಬೇಕಾಗುತ್ತದೆ.

೪-೩೦ ಪಿ. ಎಂ.

ಸ್ವಾಮಿ, ೧೯೬೯-೭೦ರಲ್ಲಿ ಎಕ್ಸ್‌ಪೋ ೭೦ ನಡೆದಾಗ ನಾನು ಈ ಸದನದಲ್ಲೇ ಸದಸ್ಯನಾಗಿದ್ದೆ. ಆಗ ನಾನು ಕಾರ್ಮಿಕ ಚಳುವಳಿ ಮಾಡಿಸಬೇಕೆಂದಾಗಲಿ, ಅಥವಾ ಅದಕ್ಕೆ ಬೆಂಕಿ ಹಚ್ಚುವ ಪ್ರಯತ್ನವನ್ನಾಗಲಿ ನಾನು ಮಾಡಲಿಲ್ಲ. ಮನಸ್ಸು ಮಾಡಿದರೆ ನಾನು ಅಂಥ ಹೇಯ ಕೃತ್ಯವನ್ನು ಮಾಡಬಹುದಿತ್ತು. ಇಂಥ ನೀತಿ ನಿರೂಪಣೆಯನ್ನು ಮಾಡುವುದಾದರೆ ಯಾವುದೇ ವ್ಯಕ್ತಿಗೂ ಕೂಡ ಕಾಲೇಜುಗಳನ್ನು ಪ್ರಾರಂಭ ಮಾಡುವುದಕ್ಕೆ ಅವಕಾಶವನ್ನು ಕೊಡಬಾರದು. ಇಲ್ಲಿ ಯಾವುದೋ ಎರಡು ಸಮಾಜದವರು ಈ ಕಾಲೇಜುಗಳನ್ನು ಸ್ಥಾಪನೆ ಮಾಡುತ್ತಿದ್ದಾರೆಂದು ತಿಳಿದು ಇದಕ್ಕೆ ಅವಕಾಶ ಕೊಡುವುದಿಲ್ಲವೆಂದು ಹೇಳುವುದು ಸರಿಯಲ್ಲ. ಈ ವಿಚಾರಕ್ಕೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಯವರ ಜೊತೆಯಲ್ಲಿ ನಾನೂ ಅಲ್ಲಿಗೆ ಹೋಗಿ ಬಂದಿರುವುದರಿಂದ ವಿಧಿಯಿಲ್ಲದೆ ಎಲ್ಲ ವಿಚಾರವನ್ನೂ ಸದನದ ಮುಂದೆ ಹೇಳಲೇಬೇಕಾಗುತ್ತದೆ.

ಶ್ರೀ ಮಳ್ಳೂರು ಆನಂದರಾವ್.—ಸ್ವಾಮಿ ಅಧ್ಯಕ್ಷರೆ, ಈ ವಿಚಾರದಲ್ಲಿ ನಾನೂ ಕೆಲವು ವಿಷಯಗಳನ್ನು ಸಂಕ್ಷೇಪವಾಗಿ ತಿಳಿಸಬೇಕಾಗಿದೆ. ಈ ವಿಷಯದ ಗಹನತೆಯನ್ನು ನೋಡಿಕೊಂಡು ಮಾತನಾಡುವುದಕ್ಕೆ ತಾವು ಅವಕಾಶವನ್ನು ಕೊಡಬೇಕು. ಆದರೆ ಮಾನ್ಯ ದೇವೇಗೌಡರಿಗೆ ಮಾತನಾಡಲು ಅವಕಾಶ ಕೊಡುವ ಬಗ್ಗೆ ನನ್ನ ಅಭ್ಯಂತರವೇನೂ ಇಲ್ಲ.

† ಶ್ರೀ ಜೆ. ಎಚ್. ಪಟೇಲ್ (ಚನ್ನಗಿರಿ).—ಮಾನ್ಯ ಸಭಾಧ್ಯಕ್ಷರೆ, ನಾನು ಕೇವಲ ಒಂದೇ ಒಂದು ಪ್ರಶ್ನೆಯನ್ನು ಕೇಳಬಯಸುತ್ತೇನೆ ಅದೇನೆಂದರೆ, ಮಾನ್ಯ ಆರೋಗ್ಯ ಸಚಿವರು ಉತ್ತರ ಕೊಡುವುದಕ್ಕೆ ಮುಂಚಿತವಾಗಿ ವಿಷಯ ಎಲ್ಲೆಲ್ಲೋ ಹೋಗುತ್ತಿದೆ. ಆದ್ದರಿಂದ ನಾನು ಅನಿವಾರ್ಯವಾಗಿ ಮಾತನಾಡಲೇಬೇಕಾಗಿದೆ. ಮಾನ್ಯ ದೇವೇಗೌಡರು ಏನು ಹೇಳುತ್ತಿದ್ದಾರೆಂಬುದನ್ನು ನಾನು ಕೇಳುತ್ತಿದ್ದೇನೆ. ನಮ್ಮ ರಾಜ್ಯದಲ್ಲಿರತಕ್ಕ ಪ್ರತಿಯೊಂದು ಜಾತಿಯವರೂ ಒಂದೊಂದು ಕಾಲೇಜನ್ನು ಪ್ರಾರಂಭ ಮಾಡಿ ವಿದ್ಯೆಯನ್ನು ಮಾರಾಟ ಮಾಡುವ ಕೆಲಸ ಸರಿಯಲ್ಲ. ಕುರುಬರು ಒಂದು ಕಾಲೇಜನ್ನು ಪ್ರಾರಂಭ ಮಾಡಿದರೆಂದು ಲಿಂಗಾಯಿತರೂ ಒಂದು ಕಾಲೇಜನ್ನು ಪ್ರಾರಂಭ ಮಾಡುವುದು, ಲಿಂಗಾಯಿತರು ಮಾಡಿದರೆಂದು ಒಕ್ಕಲಿಗರೂ ಒಂದು ಕಾಲೇಜನ್ನು ಪ್ರಾರಂಭ ಮಾಡುವುದು ಅಷ್ಟು ಚೆನ್ನಾಗಿ ಕಾಣುವುದಿಲ್ಲ. ಸ್ವಾಮಿ, ನಾನು, ತಮಗೆ ಒಂದು ಮಾತನ್ನು ಹೇಳುವುದಾದರೆ, ನಮ್ಮ ಊರಿನಲ್ಲಿ ಒಂದು ಪ್ರೈಮರಿ ಸ್ಕೂಲ್‌ನ್ನು ತೆರೆಯಲು ಸರ್ಕಾರದವರನ್ನು ಕೇಳಬೇಕೆಂದು ನಾನು ಜನಗಳ ಹತ್ತಿರ ಹೇಳಿದಾಗ ಅವರು ಏನು ಹೇಳಿದರು ಅಂದರೆ ನೀವು ಪ್ರೈಮರಿ ಸ್ಕೂಲ್‌ನ್ನು ಕೇಳಿದರೆ ಕೊಡುವುದಿಲ್ಲ. ನೀವು ಕೇಳುವುದಾರೆ ಒಂದು ಮೆಡಿಕಲ್ ಕಾಲೇಜನ್ನೇ ಕೇಳಿ, ಸಮುದ್ರವರು ಕೊಡುತ್ತಾರೆಂದು ಹೇಳಿದರು, ಸ್ವಾಮಿ, ವರ್ಲ್ಡ್ ಹೆಲ್ತ್ ಆರ್ಗನೈಸೇಷನ್‌ನಲ್ಲಿ ಏನೊಂದು ಮಾತನ್ನು ಹೇಳಿದ್ದಾರೆ ಎಂಬುದನ್ನು ಇಲ್ಲಿ ಹೇಳಬಯಸುತ್ತೇನೆ. ಅದು ಏನೆಂದರೆ :

> "Indian estimate is: it costs American Dollars 9,600 to train a physicians. Thus 15,000 physicians are at present outside India represent a loss of investment to Government of India to the tune of 144 million dollars"

ಇವತ್ತು ರಾಮಯ್ಯ ಮೆಡಿಕಲ್ ಕಾಲೇಜಿನಲ್ಲಿರುವವರ ಪೈಕಿ ನೂರಕ್ಕೆ ೩ ಜನ ಮಾತ್ರ ನಮ್ಮ ಕರ್ನಾಟಕದವರಿದ್ದಾರೆ. ಇನ್ನುಳಿದ ೯೭ ಜನ ಬೇರೆ ಕಡೆಯಿಂದ ಬಂದಿರುವವರು. ಅವರು ಮಲೇಷ್ಯಾದಿಂದಲೋ ಅಥವಾ ಬೇರೆ ಎಲ್ಲಿಂದಲೋ ಹಣ ತಂದುಕೊಟ್ಟು ಇಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಇದರಿಂದ ಸಾಹುಕಾರರನ್ನು ಇನ್ನೂ ಸಾಹುಕಾರರನ್ನಾಗಿ ನಾವು ಮಾಡಿದಂತಾಗುತ್ತಿದೆ, ನಮ್ಮ ದೇಶದ ಲೆಕ್ಕದ ಪ್ರಕಾರ ಪ್ರತಿ ಎರಡು ಸಾವಿರ ಜನರಿಗೆ ಒಬ್ಬ ಡಾಕ್ಟರ್ ಇರಬೇಕು. ಮೊದಲಿಯಾರ್ ಕಮಿಟಿ ರಿಪೋರ್ಟಿನ ಪ್ರಕಾರ ೬೦೦ ಜನರಿಗೆ ಒಬ್ಬ ಡಾಕ್ಟರ್ ಇರಬೇಕು. ಇಂಥ ಒಂದು ದಂಧೆ ಮಾಡಿಕೊಂಡು ಡಾಕ್ಟರ್‌ಗಳನ್ನು, ಇಂಜಿನಿಯರ್‌ಗಳನ್ನು ನಾವು ತಯಾರು ಮಾಡುತ್ತಾ ಹೋಗುತ್ತಿದ್ದೇವೆ, ಇವತ್ತು ಮಾನ್ಯ ಆರ್ಮುಗಂರವರು ಮೆಡಿಕಲ್ ಕಾಲೇಜನ್ನು ಪ್ರಾರಂಭ ಮಾಡುವುದಾದರೆ ಲಿಂಗಾಯಿತರು ಏತಕ್ಕೆ ಪ್ರಾರಂಭ ಮಾಡಬಾರದು ? ಕುರುಬರು ಏತಕ್ಕೆ ಮಾಡಬಾರದು ? ಕುಂಬಾರರು ಏತಕ್ಕೆ ಮಾಡಬಾರದು? ಈ ವಿಚಾರವನ್ನು ಗಂಭೀರವಾಗಿ ಯೋಚನೆ ಮಾಡಿಲ್ಲ. ಇವತ್ತಿನ ದಿವಸ ಮೆಡಿಕಲ್ ಕಾಲೇಜುಗಳನ್ನು ಓಪನ್ ಮಾಡುವುದು ಒಂದು ಹುಡುಗಾಟಿಕೆಯಾಗಿದೆ. ಆದರೆ ನೀವು ಡಾಕ್ಟರ್‌ಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ತಯಾರು ಮಾಡುವುದನ್ನು ಬೇಡವೆಂದು ನಾನು ಹೇಳುತ್ತಿಲ್ಲ. ಇವತ್ತು ಕ್ಯಾಪಿಟೇಷನ್ ಫೀ ತೆಗೆದುಕೊಳ್ಳುವುದು ಬೇಡ ಎಂದು ಹೇಳುವುದಾದರೆ ಎಷ್ಟು ಜನ ವಿದ್ಯಾರ್ಥಿಗಳು ಬರುತ್ತಾರೆಂದು ಯೋಚನೆ ಮಾಡಿ ನೋಡಿ. ೧ ಲಕ್ಷ ೬೦ ಸಾವಿರ ರೂ. ಡೊನೇಷನ್ ಕೊಟ್ಟು ಇಲ್ಲಿ ಓದಿದ ಡಾಕ್ಟರ್‌ಗಳು ಇವತ್ತು ಬೊಂಬಾಯಿಯಲ್ಲೊ, ಕಲ್ಕತ್ತಾದಲ್ಲೋ, ಇದ್ದಾರೆ ಇಲ್ಲವೇ ಕೆನಡಾಕ್ಕೆ ಹೋಗುತ್ತಿದ್ದಾರೆ. ಇಷ್ಟೊಂದು ಖರ್ಚು ಮಾಡಿ ದೊಡ್ಡವರನ್ನು ಇನ್ನೂ ದೊಡ್ಡವರನ್ನಾಗಿ ನಾವು ಮಾಡುತ್ತಿದ್ದೇವೆ. ಇಡೀ ದೇಶದಲ್ಲೇ ಪ್ರೈವೇಟ್ ಕಾಲೇಜುಗಳಲ್ಲಿ ಕ್ಯಾಪಿಟೇಷನ್ ಫೀ ತೆಗೆದುಕೊಳ್ಳುತ್ತಿರುವುದು ಈ ನಮ್ಮ ಕರ್ನಾಟಕ ರಾಜ್ಯದಲ್ಲಿ ಮಾತ್ರ.

ಸ್ವಾಮಿ, ನಾನು ತಮಗೆ ಒಂದು ಮಾತನ್ನು ಹೇಳಬಯಸುತ್ತೇನೆ. ನೀವು ಒಳ್ಳೆಯ ಡಾಕ್ಟರುಗಳನ್ನು ತಯಾರು ಮಾಡಿ ಅವರನ್ನು ಹಿಂದೆ ಇದ್ದ ರೀತಿಯಲ್ಲಿ ಹಳ್ಳಿಗಳಿಗೆ ಹೋಗಿ ಇಂತಿಷ್ಟುಕಾಲ ಸೇವೆ

ಸಲ್ಲಿಸಬೇಕೆಂದು ಕಡ್ಡಾಯವಾಗಿ ಕಳುಹಿಸಿಕೊಡಿ. ಆದರೆ ಇಲ್ಲಿ ಡಾಕ್ಟರ್ ಪರೀಕ್ಷೆ ಪಾಸ್ ಮಾಡಿಕೊಂಡು ಹೆಂಡತಿಯನ್ನು ಕಟ್ಟಿಕೊಂಡು ಲಂಡನ್‌ನಲ್ಲಿ ಇರುತ್ತೇನೆಂದು ಹೇಳುವವರಿಗೆ ಅವಕಾಶವನ್ನು ಕೊಡಬಾರದು. ಭಾರತೀಯ ಸಮಾಜಕ್ಕೆ ಆತ್ಯವಶ್ಯಕವಾಗಿ ಬೇಕಾಗಿರತಕ್ಕ ನೀತಿ ಏನಿದೆ ಅದನ್ನು ಅನುಸರಿಸಬೇಕೆಂದು ಹುಡುಗರು ಕೇಳುತ್ತಿದ್ದಾರೆ. ಇದನ್ನು ಮಾನ್ಯ ಮಂತ್ರಿಯವರು ಒಪ್ಪಬೇಕು.

ಶ್ರೀ ಹೆಚ್.ಡಿ. ದೇವೇಗೌಡ.—ಸ್ವಾಮಿ, ಜಾತಿಯ ಹೆಸರಿನಲ್ಲಿ ಮೆಡಿಕಲ್ ಕಾಲೇಜನ್ನು ಪ್ರಾರಂಭ ಮಾಡುವುದು ರಾಜ್ಯಕ್ಕೆ ಅಪಾಯಕಾರಿ. ೨ ಕಾಲೇಜುಗಳು ಪ್ರಾರಂಭವಾದ ನಂತರ ಈಗ ಈ ವ್ಯಾಧಿ ಪ್ರಾರಂಭವಾಯಿತು. ಇದಕ್ಕೆ ಮುಂಚಿತವಾಗಿ ಕಸ್ತೂರಿಬಾ ಮೆಡಿಕಲ್ ಕಾಲೇಜನ್ನು ಮತ್ತು ಮಣಿಪಾಲ್ ಮೆಡಿಕಲ್ ಕಾಲೇಜನ್ನು ಪ್ರಾರಂಭಮಾಡಿದಾಗ ಯಾರೂ ಕೇಳಲಿಲ್ಲ. ಕಳೆದ ಸಾರಿ ಎರಡು ಮೆಡಿಕಲ್ ಕಾಲೇಜುಗಳಿಗೆ ಪರ್ಮಿಷನ್ ಕೊಟ್ಟಮೇಲೆ ಈ ಒಂದು ಆಂಧೋಲನ ಪ್ರಾರಂಭವಾಗಿದೆ. ಕಳೆದಸಾರಿ ಒಬ್ಬ ವ್ಯಕ್ತಿಗೆ ಪರ್ಮಿಷನ್ ಕೊಟ್ಟಾಗ ಯಾರೂ ಚರ್ಚೆಮಾಡಲಿಲ್ಲ. ಆಗ ನಿಮ್ಮ ಛೇಂಬರ್‌ನಲ್ಲಿ ಆರೋಗ್ಯ ಮಂತ್ರಿಗಳ ಛೇಂಬರ್‌ನಲ್ಲಿ ಆಗ ನೀವು ಏತಕ್ಕೆ ಕೇಳಲಿಲ್ಲ. ಈಗ ಈ ಮೆಡಿಕಲ್ ಕಾಲೇಜುಗಳ ಬಗ್ಗೆ ಪ್ರತಿಭಟನೆ ಮಾಡುತ್ತಿದ್ದೀರಿ. ೬–೭ ಇಂಜನಿಯರಿಂಗ್ ಕಾಲೇಜುಗಳನ್ನು ಪ್ರಾರಂಭ ಮಾಡಿದಾಗ ಇದರ ಬಗ್ಗೆ ಯಾರಾದರೂ ಮಾತನಾಡಿದಿರಾ? ನೀವು ಈ ನೀತಿಯನ್ನು ಅನುಸರಿಸುವುದರಿಂದ ಒಂದು ದೊಡ್ಡ ಆಂದೋಳನ ನಮ್ಮ ಸಮಾಜದಲ್ಲಿ ಉಂಟಾಗುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಂತಾಗುತ್ತದೆಂದು ನಾನು ತಮಗೆ ಹೇಳಬಯಸುತ್ತೇನೆ.

SRI C.M. ARUMUGHAM.—I will speak. Finally let him reply. The Speaker could say whether one should speak or not.

CHAIRMAN.—Please address the Chair.

SRI C.M. ARUMUGAM.—Mr. Speaker, I want to make this clear. Whether I look at you, I look here, the Speaker is all over. I need not see only you. This is what one has to understand, because you look at the Speaker. Why ? I can see the watch and speak, but I am addressing the Speaker only. Anyway kindly give me a chance.

† ಶ್ರೀ ಮಳ್ಳೂರ್ ಆನಂದರಾವ್ (ರಾಜಾಜಿನಗರ).— ಮಾನ್ಯ ಸಭಾಧ್ಯಕ್ಷರೇ ಮಾನ್ಯ ಶ್ರೀ ದೇವೇಗೌಡರು ಹೇಳಿದಂತೆ ಅದರಲ್ಲಿ ಬಹಳ ಅರ್ಥ ಇದೆ. ಕಾಲೇಜುಗಳ ಸ್ಥಾಪನೆ ಮಾಡುವುದರಲ್ಲಿ ಒಂದು ಸಮಗ್ರವಾದ ನೀತಿ ಇಲ್ಲದೆ ಮೊದಲನಿಂದಲೂ ಜಾತೀಯತೆಯನ್ನೇ ಮಾಡಿಕೊಂಡು ಬಂದಿರುತ್ತಾರೆ. ಕಾಲೇಜುಗಳನ್ನು ಸ್ಥಾಪನೆ ಮಾಡಲು ಕೇಳಿದವರಿಗೆಲ್ಲ ಕೊಟ್ಟು ಜಾತಿಗಳ ಆಧಾರದಮೇಲೆ ಮನಾಪಲಿ ಮಾಡಿಕೊಂಡು ಬಂದಿರುತ್ತಾರೆ. ಕಾಲೇಜುಗಳನ್ನು ಸ್ಥಾಪನೆಮಾಡಿ ಆವರವರ ಜಾತಿಯವರನ್ನೇ ಉಪಾಧ್ಯಾಯರನ್ನಾಗಿ ನೇಮಿಸಿಕೊಳ್ಳುವುದು, ಅವರವರ ಜಾತಿಯವರನ್ನೇ ಜವಾನನಿಂದ ಹಿಡಿದು ಲೆಕ್ಚರರವರೆಗೆ ನೇಮಿಸಿಕೊಳ್ಳತಕ್ಕಂಥದ್ದು ಕರ್ನಾಟಕದಲ್ಲಿ ಒಂದು ನಗ್ನಸತ್ಯ ವಾದುದಾಗಿರುತ್ತದೆ. ಪ್ರೈಮರಿ ಶಾಲೆಗಳಿಂದ ಹಿಡಿದು ಮೆಡಿಕಲ್ ಕಾಲೇಜುಗಳವರೆಗೆ ಡೊನೇಶನ್‌ನನ್ನು ವಸೂಲಿ ಮಾಡತಕ್ಕಂಥದ್ದು ಆವರವರ ಯೋಗ್ಯತೆಗೆ ತಕ್ಕಂತೆ ವಸೂಲು ಮಾಡುತ್ತಿದ್ದಾರೆ. ಈ ಸದನದಲ್ಲಿ ಇದರಬಗ್ಗೆ ಬೇಕಾದಷ್ಟು ಸಲ ಹೇಳಿರುತ್ತೇನೆ. ಪಂತಿಗೆ ವಸೂಲು ಮಾಡುವ ವಿಷಯದಲ್ಲಿ ಸರ್ಕಾರ ಒಂದು ನಾಗರೀಕವಾದ ನಿರ್ಣಯವನ್ನು ಖಂಡಿತವಾಗಿಯೂ ತೆಗೆದಂಕೊಳ್ಳಬೇಕೆಂದು ಮಾನ್ಯ ಗುಂಡೂರಾಯರನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಕೇವಲ ಮೆಡಿಕಲ್ ಕಾಲೇಜುಗಳಷ್ಟೇ ಅಲ್ಲ, ಪ್ರಿ ಪ್ರೈಮರಿ ಶಾಲೆಗಳಿಂದ ಹಿಡಿದು ಮೆಡಿಕಲ್ ಕಾಲೇಜುಗಳವರೆಗೂ ಯಾವುದೇ ಜಾತಿಯವರು ಶಾಲೆಗಳನ್ನು ಸ್ಥಾಪನೆ ಮಾಡಲಿ ಒಂದು ಪೈಸೆಯನ್ನೂ ತೆಗೆದುಕೊಳ್ಳದಂತೆ ನಡೆಸಲು ಮುಂದೆ ಬರಲಿ, ನಾವು ಬೇಡವೆಂದು ಹೇಳುವುದಿಲ್ಲ. ಈವತ್ತಿನದಿವಸ ಮೆಡಿಕಲ್ ಕಾಲೇಜುಗಳಲ್ಲಿ ಪ್ರವೇಶ ಅವಕಾಶವನ್ನು ಪಡೆಯಬೇಕಾದರೆ ಒಂದು ಲಕ್ಷದಿಂದ ಹಿಡಿದು ಆರವತ್ತು ಸಾವಿರ ರೂಪಾಯಿಗಳವರೆಗೂ ಮಾರಾಟ ಮಾಡುತ್ತಿದ್ದಾರೆ. ಇದು ನಾಗರೀಕತೆಯೇ?.

ಶ್ರೀ ಲಕ್ಷ್ಮೀಸಾಗರ್.—ನಾಗರೀಕತೆಯಲ್ಲ, ಕೊಳ್ಳೆ, ದರೋಡೆ ಎಂದಂ ಹೇಳಿ.

ಶ್ರೀ ಮಳ್ಳೂರು ಆನಂದರಾವ್.—ಪ್ರೈವೇಟು ಶಾಲೆಗಳನ್ನು ತೆರೆಯಲು ಯಾರು ಮುಂದೆ ಬರುವುದಿಲ್ಲ. ಮೆಡಿಕಲ್ ಕಾಲೇಜುಗಳನ್ನು ತೆರೆಯಲು ಜನರು ಮುಂದೆ ಮುಂದೆ ಬರುವುದಕ್ಕೆ ಕಾರಣವೇನೆಂದರೆ ಇದರಿಂದ ಕೋಟ್ಯಾಂತರ ರೂಪಾಯಿಗಳನ್ನು ಲಾಭ ಪಡೆಯಬಹುದು ಎನ್ನುವುದು ನಗ್ನಸತ್ಯವಾಗಿರುತ್ತದೆ. ಆದಕ್ಕೋಸ್ಕರವಾಗಿ ಮಾನ್ಯ ಶ್ರೀ ಜೆ. ಎಚ್. ಪಟೇಲ್‌ರವರು ಹೇಳಿದಂತೆ ಒಂದೊಂದು ಜಾತಿಯವರು ಮೂರು ನಾಲ್ಕು ಕಾಲೇಜುಗಳನ್ನು ತೆಗೆಯಲು ಅವಕಾಶಕೊಡಿ ಬೇಡವೆಂದು ಹೇಳುವುದಿಲ್ಲ. ಆದರೆ ಅವರು ಒಂದು ಪೈಸೆಯನ್ನು ತೆಗೆದುಕೊಳ್ಳಬಾರದು. ನೂರಕ್ಕೆ ನೂರು ಸೀಟುಗಳನ್ನು ಸರ್ಕಾರದವರೇ ಅಲಾಟ್ ಮಾಡುತ್ತೇವೆಂದು ಹೇಳಿ. ಆವಾಗ ಯಾರೂ ಮುಂದೆ ಬರುವುದಕ್ಕೆ ಅಪೇಕ್ಷೆ ಪಡುವುದಿಲ್ಲ. ಮಾನ್ಯ ದೇವೇಗೌಡರು ರೆಪ್ರಸೆಂಟ್ ಮಾಡುವುದಿಲ್ಲ. ನಾನೂಕೂಡ ಮುಂದೆ ಬರುವುದಿಲ್ಲ. ಸರ್ಕಾರ ಇದನ್ನು ಅರ್ಥಮಾಡಿಕೊಂಡರೆ ಒಳ್ಳೆಯದಾಗುತ್ತದೆಂದು ನಾನು ಸಲಹೆ ಮಾಡುತ್ತೇನೆ. ವಿದ್ಯಾರ್ಥಿಗಳು ಈವತ್ತು ಏನು ಒಂದು ಬೇಡಿಕೆಯನ್ನು ಇಟ್ಟಿದ್ದಾರೆ, ಅದಕ್ಕೆ ಸರ್ಕಾರದವರು ಏನು ಒಂದು ಪ್ರತಿಕ್ರಿಯೆ ತೋರಿಸಿದ್ದಾರೆ ಎರಡೂ ಹತ್ತಿರ ಪತ್ತಿರ ಬಂದಿದೆ. ಮಾನ್ಯ ಮುಖ್ಯಮಂತ್ರಿಗಳು ನ್ಯಾಷನಲೈಸ್ ಮಾಡುವ ಬಗ್ಗೆ ವಿಚಾರ ಮಾಡುತ್ತಿದ್ದೇವೆಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಆದರ ಬಗ್ಗೆ ನಿರ್ಣಯವನ್ನು ತೆಗೆದುಕೊಂಡರೋ ಇಲ್ಲವೋಗೊತ್ತಿಲ್ಲ. ನಾನು ಹೇಳುವುದಾದರೂ ಇಷ್ಟೇ ಎಲ್ಲಾ ಕಾಲೇಜುಗಳನ್ನು ನ್ಯಾಷನಲೈಸ್ ಮಾಡಿ, ಆಂದರೆ ಹಿಂದೆ ಸ್ಥಾಪನೆ ಮಾಡಿರತಕ್ಕಂಥದು, ಮುಂದೆ ತೆಗೆಯತಕ್ಕಂಥದ್ದು ಖಾಸಗಿಯವರು ನಡೆಸುತ್ತಿರತಕ್ಕಂಥದ್ದು ಎಲ್ಲವನ್ನು ನ್ಯಾಷನಲೈಸ್‌ಮಾಡಿ. ಆಗ ಯಾರ ಸ್ವರವೂ ಇರುವುದಿಲ್ಲ. ದಯವಿಟ್ಟು ನ್ಯಾಷನಲೈಸ್ ಮಾಡಿ ಎಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಎರಡನೆಯದಾಗಿ ಚರ್ಚೆ ಮಾಡುವುದಕ್ಕೆ ಬೇಕಾದಷ್ಟು ವಿಷಯಗಳು ಇರುತ್ತವೆ. ಎಲ್ಲ ವಿಷಯಗಳನ್ನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಒಂದು ಪ್ರೈವೇಟ್ ಮಿಟಿಂಗ್‌ನ್ನು ಕರೆಯಲ್ಲಿ ಎಲ್ಲ ವಿಷಯಗಳನ್ನು ಹೇಳುತ್ತೇನೆ. ಈವತ್ತಿನ ದಿವಸ ಡಾಕ್ಟರುಗಳು ರಸ್ತೆಗಳಿಗೆ ಇಳಿದಿದ್ದಾರೆ. ಇದು ನಿಜವಾಗಿಯೂ ನಾಚಿಕೆಪಡುವಂಥ ವಿಷಯವಾಗಿದೆ. ಎರಡು ತಿಂಗಳಿಂದಲೂ ಕಾಲೇಜುಗಳಲ್ಲಿ ಪಾಠಗಳು ನಡೆಯುತ್ತಿಲ್ಲ. ಆಸ್ಪತ್ರೆಗಳಿಗೆ ವೈದ್ಯರುಗಳು ಹೋಗುತ್ತಿಲ್ಲ. ಮಾನ್ಯ ಲಕ್ಷ್ಮೀಸಾಗರ್‌ರವರು ಹೇಳಿದಹಾಗೆ ಲಾಯರ್ ತಪ್ಪುಮಾಡಿದರೆ ಅಪೀಲ್ ಇದೆ. ಆದರೆ ಡಾಕ್ಟರ್ ತಪ್ಪುಮಾಡಿದರೆ ಅದಕ್ಕೆ ಅಪೀಲ್ ಇಲ್ಲ. ಆಸ್ಪತ್ರೆಗಳಿಗೆ ಡಾಕ್ಟರುಗಳನ್ನು ಬಿಡುವುದಿಲ್ಲವೆಂದು ಹೇಳುತ್ತಿರುವುದು ಅವರ ಹುದ್ದೆಗೆ ಶೋಭೆಯಲ್ಲ. ನನಗೆ ಬಂದಿರುವ ಇನ್‌ಫರ್‌ಮೇಷನ್ ಪ್ರಕಾರವಾಗಿ ಮುಷ್ಕರವನ್ನು ಇನ್ನು ವಾಪಸ್ ಪಡೆದುಕೊಂಡಿಲ್ಲ. ನಾಳೆ ಏನು ಮಾಡುವವರಿದ್ದಾರೋ. ಅವರು ಆಸ್ಪತ್ರೆ ಆಸ್ಪತ್ರೆಗಳಿಗೆ ಹೋಗಿ ಡಾಕ್ಟರುಗಳನ್ನು ಒಳಗೆ ಬಿಡುವುದಿಲ್ಲವೆಂದು ಹೇಳುತ್ತಿದ್ದಾರೆ, ಈ ಕೃತ್ಯ ಮಾಡಿದರೆ ಇದನ್ನು ಇಡಿ ಸಭೆಯೇ ಖಂಡಿಸಬೇಕಾಗುತ್ತದೆ. ಆದಕ್ಕೆ ಅವಕಾಶ ಮಾಡಿಕೊಡಬೇಡಿ. ಮಾನ್ಯ ಆರೋಗ್ಯ ಸಚಿವರ ನೇತೃತ್ವದಲ್ಲಿ ಈಗಾಗಲೇ ಒಂದು ಸಮಿತಿಯನ್ನು ಮಾಡಿದ್ದರು. ಆ ಸಮಿತಿಯವರು ಏನು ಮಾಡಿದರೋ ಗೊತ್ತಿಲ್ಲ. ಮುಷ್ಕರ ತೀರ್ವತೆಯನ್ನು ತಾಳಿ ಒಂದು ತಿಂಗಳಾಯಿತು. ಚರ್ಚೆಯನ್ನು ಮಾಡುವುದಕ್ಕೆ ಈ ಗಾಗಲೇ ಒಂದು ನೀತಿ ನಿರೂಪಣೆ ಮಾಡಿದ್ದೀರಿ, ಅದನ್ನು ತೀವ್ರವಾಗಿ ಪರಿಶೀಲಿಸಲು ವಿದ್ಯಾರ್ಥಿಗಳ ಪ್ರತಿನಿಧಿಗಳನ್ನು ಕರೆಸುತ್ತೇವೆಂದು ಹೇಳಿದ್ದೀರಿ. ಅದರಂತೆ ಈ ಸಂಜೆಯೇಅವರನ್ನು ಕರೆಸಿ. ಏತಕ್ಕೆಂದರೆ ನಾಳೆಯದಿವಸ ವಿದ್ಯಾರ್ಥಿಗಳು ರಸ್ತೆಗೆ ಇಳಿದು ಪೋಲೀಸ್‌ನವರು ಲಾಠಿ ಚಾರ್ಜ್ ಮಾಡುವಮಟ್ಟಕ್ಕೆ ಸೋಗುವ ಬದಲು ವಿದ್ಯಾರ್ಥಿ ಪ್ರತಿನಿಧಿಗಳನ್ನು ಕರೆಸಿ ಚರ್ಚಿಸಿ ಮುಷ್ಕರವನ್ನು ಅವರು ಹಿಂತೆಗೆದುಕೊಳ್ಳುವಂಥ ಪ್ರಯತ್ನ ಮಾಡಿ ಸಮಸ್ಯೆಯನ್ನು ಬಗೆಹರಿಸಿದರೆ ಜಗತ್ತಿಗೆ ಅನುಕೂಲವಾಗುತ್ತದೆ. ದಯವಿಟ್ಟು ಈ ಕೆಲಸವನ್ನು ಮಾಡಿ ಎಂದು ಕಳಕಳಿಯಿಂದ ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

† SRI C.M. ARUMUGHAM (K.G.F.).— Mr. Chairman Sir, in the reply to the call attention, of course, it has been properly pointed out by Sri Ramdev — the Minister said that this strike is against the permission granted by the Government to start Kempe Gowda Medical College and Dr. Ambedkar Medical College of Bangalore and also for the abolition of the capitation fee. This is firstly for the permission and secondly for the abolition of capitation fees. Now, I felt that

